ಎರಡೂ ಸೇವೆಗಳನ್ನು ಸಂಯೋಜಿಸಿ ರಾಜ್ಯ ಕೃಷಿ ಮಾರಾಟ ಇಲಾಖಾ ಸೇವೆ (ಸಂಯೋಜಿತ) ನಿಯಮಾವಳಿಗಳನ್ನು ರಚಿಸಲಾಗಿದೆ. ತದನಂತರ ಸಯೋಜಿತ ಸೇವೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಕ್ರಮ ಜರುಗಿಸಿದ್ದು, ಸರಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ

ಇ) ಇಲ್ಲ

ಈ) ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಉ) ಕೃಷಿ ಮಾರಾಟ ಇಲಾಖೆ ಸೇವೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಸರ್ಕಾರದ ಹಂತದಲ್ಲಿ ಕ್ರಮ ಕೈಗೊಂಡಿದೆ.

ಊ) ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆ ಬಬಲೇಶ್ವರ ಏತ ನೀರಾವರಿ ಯೋಜನೆಯ ನೀರಾವರಿ ಕ್ಷೇತ್ರದ ವಿವರ

1375 (1690) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಯೋಜಿತ ಬಿಜಾಪುರ ಜಿಲ್ಲೆ ಬಬಲೇಶ್ವರ ಏತ ನೀರಾವರಿ ಯೋಜನೆಯಲ್ಲಿ ಬರುವ ನೀರಾವರಿ ಕ್ಷೇತ್ರ ಎಷ್ಟು;

ಆ) ಹಾಗೂ ಕಾಖಂಡಕಿ, ಸಂಗಾಪೂರ, ಶಗನಾಳ, ಕಂಬೋನಿ, ಮುಂತಾದ ಗ್ರಾಮಗಳ ಜಮೀನಿಗೂ ಈ ನೀರಾವರಿ ಯೋಜನೆ ವ್ಯಾಪ್ತಿಗೊಳಪಡುತ್ತಿದೆಯೇ (ವಿವರ ನೀಡುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) 7000 ಹೆಕ್ಟೇರ್‌ಗಳು

ಆ) ಸರ್ವೆ ಕಾರ್ಯವು ಮುಗಿದಿದ್ದು ವಿವರವಾದ ಅಂದಾಜು ವರದಿಯನ್ನು ತಯಾರಿಸಲಾಗುತ್ತದೆ. ವಿವರವಾದ ಅಂದಾಜು ವರದಿಯನ್ನು ತಯಾರಿಸಲಾಗುತ್ತದೆ. ವಿವರವಾದ ಅಂದಾಜು ವರದಿಯ ಈ ವಿವರಗಳು ಲಭ್ಯವಾಗುವುವು.

ಬಿಜಾಪುರ ಜಿಲ್ಲೆಯ ಮುಳವಾಡ ಏತ ನೀರಾವರಿ ಯೋಜನೆಯಿಂದ ನೀರಿನ ಹಂಚಿಕೆ

1376 (1687) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳವಾಡ ಏತ ನೀರಾವರಿ ಯೋಜನೆ ಅಡಿಯಲ್ಲಿ ಬಿಜಾಪುರ ಜಿಲ್ಲೆಯ ನೀರಿನ ಹಂಚಿಕೆಯಲ್ಲಿ 20 ಟಿ.ಎಂ.ಸಿ. ನೀರನ್ನು ಬೇರೆ ಜಿಲ್ಲೆಗಳಿಗೆ ಹರಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ;

ಆ) ಇದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಮುಳವಾಡ ಏತ ನೀರಾವರಿ ಎ ಸ್ಕೀಮಿನ ಕಾಮಗಾರಿ ಯಾವಾಗ ಪೂರ್ಣಗೊಳ್ಳುವುದು: ಹಾಗೂ ಸದರಿ ಸ್ಕೀಮಿನಲ್ಲಿ ಮಮದಾಪುರ, ರೇಣಿಹಾಳ್, ಆಸಂಗಿ ಮುಂತಾದ ಕೆರೆಗಳಿಗೂ ನೀರು ಬಿಡುವ ವಿಷಯ ಪ್ರಸ್ತಾಪದಲ್ಲಿದೆಯೇ (ವಿವರ ನೀಡುವುದು)

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಇಲ್ಲ

ಆ) ಅನ್ವಯಿಸುವುದಿಲ್ಲ.

ಇ) ಮುಳವಾಡ ಏತ ನೀರಾವರಿ ಸ್ಕೀಮಿನ ಕಾಮಗಾರಿಗಳು 2004ರಲಲಿ 'ಎ' ಪೂರ್ಣಗೊಳಿಸಲಾಗುವುದು. ಸದರದಿ 'ಎ' ಸ್ಕೀಂನಲ್ಲಿ ಮಮದಾಪುರ, ರೇಣೆಹಾಳ, ಅಸಂಗಿ ಮುಂತಾದ ಕೆರೆಗಳಿಗೆ ನೀರನ್ನು ಬಿಡುವ ಪ್ರಸ್ತಾವನೆ ಇರುವುದಿಲ್ಲ.

ನಾಗಮಂಗಲ ತಾಲ್ಲೂಕಿನಲ್ಲಿ ಖಾಲಿ ಇರುವ ಕೃಷಿ ಸಹಾಯಕರ ಹುದ್ದೆಗಳು

1377 (1712) ಶ್ರೀ ಚಲುವರಾಮಸ್ವಾಮಿ ಎಸ್. (ನಾಗಮಂಗಲ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ ಕೃಷಿ ಸಹಾಯಕ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಾರ್ವಜನಿಕ ಹಿತದೃಷ್ಟಿಯಿಂದ ಈ ಹುದ್ದೆಗಳನ್ನು ತುಂಬಲು ಯಾವ ಕ್ರಮಕೈಗೊಳ್ಳಲಾಗುವುದು.

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) ಬಂದಿರುತ್ತದೆ

ಆ) ನಾಗಮಂಗಲದಲ್ಲಿ 22 ಕೃಷಿಸಹಾಯಕರ ಹುದ್ದೆಗಳು ಮಂಜೂರಾಗಿದ್ದು, ಇವುಗಳಲ್ಲಿ 12 ಕೃಷಿ ಸಹಾಯಕರ ಹುದ್ದೆಗಳು ಭರ್ತಿ ಯಾಗಿದ್ದು, 10 ಹುದ್ದೆಗಳು ಖಾಲಿ ಇವೆ. ಸರ್ಕಾರದ ಆದೇಶ ಸಂಖ್ಯೆ:ಎಹೆಚ್‌ಡಿ 278 ಎಎಂಎಲ್ 94, ದಿನಾಂಕ:31-5-1995 ರಲ್ಲಿ ಕೃಷಿ ಇಲಾಖಾ ಪುನರ್ ರಚನೆಯಾಗಿದ್ದು ಈ ಆದೇಶದಂತೆ ಕೃಷಿ ಸಹಾಯಕರ ನೇಮಕಾತಿ ಮಾಡುವ ಅವಕಾಶವಿಲ್ಲದ ಕಾರಣ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಕೃಷಿ ಸಹಾಯಕರರಿಂದಲೇ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕೆ.ಆರ್.ಪೇಟೆ ತಾಲ್ಲೂಕಿನ ಹೊಸ ಹೊಳಲುಮೇಲ್ಗಾಲುವೆ ಕಾಮಗಾರಿ

1378 (1679) ಶ್ರೀ ಚಂದ್ರಶೇಖರ್ ಕೆ.ಬಿ. (ಕೆ.ಆರ್.ಪೇಟೆ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜ ಪೇಟೆ ತಾಲ್ಲೂಕಿನ ಹೊಸ ಹೊಳಲುಮೇಲ್ಗಾಲುವೆ ಕಾಮಗಾರಿಯನ್ನು ಈ ವರ್ಷದಲ್ಲಿ ಪೂರ್ಣಗೊಳಿಸಲಾಗುವುದೇ;

ಆ) ಜಮೀನು ಕಳೆದುಕೊಂಡ ರೈತರುಗಳಿಗೆ ಹಣ ಬಿಡುಗಡೆಯಾಗಿದ್ದು ಹಣ ಸಂದಾಯವಾಗಿದೆಯೆ; ಹಾಗೂ ಬೆಳೆ ನಷ್ಟ ಪರಿಹಾರದ ಹಣ ನೀಡಲಾಗಿದೆಯೆ;

ಇ) ದೊಡ್ಡನಕಟ್ಟೆ ಕಾಲುವೆ ದುರಸ್ತಿ ಯಾವ ಹಂತದಲ್ಲಿದೆ; (ವಿವರ ನೀಡುವುದು)

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಈ ಕಾಮಗಾರಿಯು ಪ್ರಗತಿಯಲ್ಲಿದ್ದು ಬರುವ 3 ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.